**ಪಿ.ಡಬ್ಲ್ಯು-01 – ಬಿ. ವಿಷಕಂಠಾಚಾರಿ**

**ಸಾಕ್ಷಿಯನ್ನು ದಿನಾಂಕಃ 10.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಡಿ.ಎಸ್. ವಕೀಲರಿಂದಃ**

ಸವ್ವೆ ಗ್ರಾಮ ಪಂಚಾಯಿತಿಗೆ ಜಂಜರ್ ನಂ. 41, ಆಸ್ತಿ ಸಂಖ್ಯೆ 40 ಮೂಲತಃ ರಾಜಪ್ಪ ಎನ್ನುವವರಿಗೆ ಸೇರಿದ ಆಸ್ತಿಯಾಗಿರುತ್ತದೆ. ಸದರಿ ರಾಜಪ್ಪರವರು ಮಾದಾಪುರ ಗ್ರಾಮದವರಾಗಿರುತ್ತಾರೆ. ಸದರಿ ಮೇಲೆ ಹೇಳಿದ ಜಂಜರ್ ನಂ. 41/40 ರ ಆಸ್ತಿಯು ರಾಜಪ್ಪರವರಿಗೆ ಮಂಜೂರಾದ ಬಗ್ಗೆ ಮಂಜೂರಾತಿ ಪತ್ರವನ್ನು ಪೋಲೀಸರಿಗೆ ನೀಡಿರುವುದಿಲ್ಲ. ಮೂಲ ದಾಖಲೆಗಳು ನಮ್ಮ ಕಛೇರಿಯಲ್ಲಿ ಇರುತ್ತದೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಹಶೀಲ್ದಾರ್ ಕಛೇರಿಯಲ್ಲಿರುತ್ತದೆಂದು ನುಡಿಯುತ್ತಾರೆ. ಸದರಿ ಆಸ್ತಿಗೆ ಸಂಬಂಧಿಸಿದ ಖಾತೆಯ ದಾಖಲೆ ನಮ್ಮ ಕಛೇರಿಯಲ್ಲಿರುತ್ತದೆಂದರೆ ಸರಿ. ಸದರಿ ಆಸ್ತಿಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ನಾವು ತಹಶೀಲ್ದಾರ್ ಕಛೇರಿಯಿಂದ ಪಡೆದಿರುವುದಿಲ್ಲ. ಅಳತೆಯ ಮೊದಲು ಆ ರೀತಿ ಮೂಲ ದಾಖಲೆಗಳನ್ನು ತಹಶೀಲ್ದಾರ್ ಕಛೇರಿಯಿಂದ ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಪಕ್ಷಗಾರರೇ ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತಾರೆಂದು ನುಡಿಯುತ್ತಾರೆ. ಚಾಸಾ-10 ರವರು ಹಾಜರುಪಡಿಸಿದ ಸದರಿ ಮೂಲ ದಾಖಲೆಗಳನ್ನು ಪೋಲೀಸರಿಗೆ ನೀಡಿರುತ್ತೇನೆ. ನಾನು ಸದರಿ ದಾಖಲೆಗಳನ್ನು ಪೋಲೀಸರ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯ ಪೋಲೀಸರು ಕೇಳಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ಚಾಸಾ-10 ರವರು ರಾಜಪ್ಪರವರಿಂದ ಕ್ರಯಕ್ಕೆ ಪಡೆದ ಬಗ್ಗೆ ನೋಂದಾಯಿತ ಕ್ರಯ ಪತ್ರ ಹಾಜರುಪಡಿಸಿದ ಮೇರೆಗೆ ಸದರಿ ಜಂಜರ್ ನಂ. 41/40 ರ ಆಸ್ತಿಗೆ ಸಂಬಂಧಿಸಿದಂತೆ ಚಾಸಾ-10 ರವರ ಹೆಸರಿಗೆ ಖಾತೆ ಬದಲಾಯಿಸಿರುತ್ತೇವೆ. ಸದರಿ

ಆಸ್ತಿಯನ್ನು ಚಾಸಾ-10 ರವರಿಗೆ ಕ್ರಯಕ್ಕೆ ನೀಡಲು ಮಾರಾಟಗಾರರಿಗೆ ಯಾವುದೇ ಹಕ್ಕು ಇಲ್ಲದೇ ಇದ್ದಾಗ್ಯೂ ಸಹ ಚಾಸಾ-10 ರವರು ನಮ್ಮ ಇಲಾಖೆಯೊಂದಿಗೆ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಆ ರೀತಿ ನಮ್ಮ ಇಲಾಖೆಯವರು ನೀಡಿದ ಸುಳ್ಳು ದಾಖಲೆಗಳ ಮೇಲೆ ಚಾಸಾ-10 ರವರು ಸದರಿ ಆಸ್ತಿಯನ್ನು ಕ್ರಯಕ್ಕೆ ಪಡೆಯಲು ನಾವು ಕುಮ್ಮಕ್ಕು ನೀಡಿರುತ್ತೇವೆಂದರೆ ಸರಿಯಲ್ಲ. ಸದರಿ ಖಾತೆ ನಂ. 41/40 ರ ಆಸ್ತಿ ಆರೋಪಿಗಳ ತಂದೆಯಾದ ದಸ್ತಗಿರ್ ಷರೀಫ್ ರವರ ಹೆಸರಿನಲ್ಲಿದ್ದು ಆರೋಪಿಗಳೇ ಅದರ ಹಕ್ಕನ್ನು ಹೊಂದಿ ಸ್ವಾಧೀನಾನುಭವದಲ್ಲಿರುತ್ತಾರೆಂದರೆ ಸರಿಯಲ್ಲ. ಅದರಂತೆ ನಮ್ಮ ಗ್ರಾಮ ಪಂಚಾಯಿತಿಯಲ್ಲಿ ದಾಖೆಗಳ ಸಹ ಇರುತ್ತವೆಂದರೆ ಸರಿಯಲ್ಲ.

ಸದರಿ ಕೃತ್ಯ ನಡೆಯಲಾಯಿತೆಂದು ಹೇಳಿದ ದಿನ ನಾನಾಗಲೀ ಅಥವಾ ಚಾಸಾ-2 ರಿಂದ ಚಾಸಾ-4 ರವರಾಗಲೀ ಕರ್ತವ್ಯದಲ್ಲಿ ಇರಲಿಲ್ಲ ಹಾಗು ಯಾವುದೇ ಅಳತೆ ಕಾರ್ಯಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಿನಾಂಕಃ 19.12.2022 ರಂದು ಅಳತೆ ಮಾಡುವ ಸಂಬಂಧ ದಿನಾಂಕಃ 12.12.2022 ರಂದು ಆರೋಪಿಗಳಿಗಾಗಲೀ ಅಥವಾ ಬಾಜೂದಾರರಿಗಾಗಲೀ ಯಾವುದೇ ನೋಟೀಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಅಳತೆಯ ಸಂಬಂಧ ದಸ್ತಗಿರ್ ಷರೀಫ್ ರವರ ಮನೆಯ ಬಳಿ ಹೋದಾಗ ಆರೋಪಿಗಳು ಅಕ್ರಮ ಗುಂಪು ಕಟ್ಟಿಕೊಂಡು ಅವಾಚ್ಯ ಶಬ್ದಗಳಿಂದ ಬೈದು ಅಳತೆ ಕಾರ್ಯಕ್ಕೆ ಅಡ್ಡಿಪಡಿಸಿ ಕೊಲೆ ಬೆದರಿಕೆ ಹಾಕಿರುವುದಿಲ್ಲ ಹಾಗು ನಾವು ಸದರಿ ದಿನ ಅಲ್ಲಿಗೆ ಹೋಗಿಯೇ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಸದರಿ ಸ್ಥಳದಲ್ಲಿ ಸುಮಾರು ಅರ್ಧ ಗಂಟೆಯಿಂದ ಒಂದು ಗಂಟೆ ಕಾಲ ಇದ್ದಿರುತ್ತೇವೆ. ಆಗ ಸಮಯ ಮಧ್ಯಾಹ್ನ ಸುಮಾರು 12.00 ಗಂಟೆಯಾಗಿರುತ್ತದೆ.

ನಾವು ಸದರಿ ಸ್ಥಳಕ್ಕೆ ಬೈಕ್ ನಲ್ಲಿ ಹೋಗಿರುತ್ತೇವೆ. ಹೆಚ್.ಡಿ. ಕೋಟೆಯಿಂದ ಕೊಡಸೀಗೆ ಗ್ರಾಮಕ್ಕೆ ಸುಮಾರು 08-10 ಕಿ.ಮೀ. ಅಂತರವಿರುತ್ತದೆ. ಆರೋಪಿಗಳು ಅಳತೆ ಕಾರ್ಯಕ್ಕೆ ಅಡ್ಡಿಪಡಿಸಿದ್ದರು ಎಂದು ಹೇಳಲಾದ ಸಮಯದಲ್ಲಿ ಪೋಲೀಸರಿಗೆ ದೂರನ್ನು ಕೊಡಲು ತೊಂದರೆ ಇರಲಿಲ್ಲ ಎಂದರೆ ಆ ದಿನ ಬೇರೆ ಕೆಲಸ ಇದ್ದುದರಿಂದ ಠಾಣೆಗೆ ಹೋಗಲು ಆಗಿರುವುದಿಲ್ಲ, ಮರುದಿನ ಹೋಗಿ ದೂರನ್ನು ನೀಡಿರುತ್ತೇನೆಂದು ನುಡಿಯುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಗಳು ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲ ಬದಲಾಗಿ ನಾನು ಹಾಗು ಚಾಸಾ-10 ರವರು ಸೇರಿಕೊಂಡು ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾಗು ಅವರಿಗೆ ಸೇರಿದ ಖಾತೆ ಸಂಖ್ಯೆ: 41/40ರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ನಿ.ಪಿ.-3 ರಿಂದ ನಿ.ಪಿ.-11ರ ದಾಖಲೆಗಳನ್ನು ಸೃಷ್ಟಿಸಿಕೊಂಡು ಪೋಲೀಸರಿಗೆ ನೀಡಿರುತ್ತೇವೆಂದರೆ ಸರಿಯಲ್ಲ. ಪೋಲೀಸರು ದಿನಾಂಕ: 16.01.2023 ರಂದು ಮಹಜರ್ ಜರುಗಿಸುವ ಸಲುವಾಗಿ ಕೃತ್ಯ ಸ್ಥಳಕ್ಕೆ ಬಂದಿರುತ್ತಾರೆ. ನಿ.ಪಿ.-2 ಮಹಜರ್ ನಲ್ಲಿ ಪೋಲೀಸರು ಏನು ಬರೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸದರಿ ಮಹಜರ್ ಗೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ.

**ಮರು ವಿಚಾರಣೆ: ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**